243 (311) : ಶ್ರೀ ಹಾಲಪ್ಪ ಹೆಚ್. (ಹೊಸನಗರ) ಮಾನ್ಯ ಜಲ ಸಂಪನ್ಮೂಲ ಹಾಗೂ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ತುಂಗಾ ಮೇಲ್ದಂಡೆ ಯೋಜನೆಯಡಿಯಲ್ಲಿ ಶಿವಮೊಗ್ಗ ತಾಲ್ಲೂಕಿನಲ್ಲಿ ಬರುವ ಮೂರು ಏತ ನೀರಾವರಿ ಯೋಜನೆಗಳ ಕಾಮಗಾರಿಗಳ ಪ್ರಸ್ತಾವನೆ ಈಗ ಯಾವ ಹಂತದಲ್ಲಿದೆ.

ಆ) ಹಾಲಿ ಯೋಜನೆಯು ಅರಣ್ಯ ಇಲಾಖೆ ವ್ಯಾಪ್ತಿಗೆ ಬರುವುದರಿಂದ ಬದಲಿ ಜಮೀನನ್ನು ಕೊಡುವ ವ್ಯವಸ್ಥೆ ಇದೆಯೇ;

ಇ) ಇದ್ದಲ್ಲಿ ಇದರ ಬಗ್ಗೆ ಕೈಗೊಂಡಿರುವ ಕ್ರಮಗಳೇನು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಹಾಗೂ ಸಾರಿಗೆ ಸಚಿವರು)

ಅ) ತುಂಗಾ ಮೇಲ್ದಂಡೆ ಯೋಜನೆಯಡಿಯಲ್ಲಿ ಯಾವುದೇ ಏತ ನೀರಾವರಿ ಕಾಮಗಾರಿಗಳು ಇರುವುದಿಲ್ಲ.

ತುಂಗಾ ಮೇಲ್ದಂಡೆ ಯೋಜನೆ ವಲಯ, ಶಿವಮೊಗ್ಗ ಅಡಿಯಲ್ಲಿ ತುಂಗಾ ಏತ ನೀರಾವರಿ ಯೋಜನೆಯು ಇರುತ್ತದೆ. ಈ ಯೋಜನೆಯಂತೆ, ಶಿವಮೊಗ್ಗ ತಾಲ್ಲೂಕು ಗಾಜನೂರಿನ ಬಳಿ ಇರುವ ತುಂಗಾ ಅಣೆಕಟ್ಟಿನ ಜಲಾಶಯದ ನೀರನ್ನು ಎತ್ತಿ ಶಿವಮೊಗ್ಗ ತಾಲ್ಲೂಕಿನ ಮೂರು ಕೆರೆಗಳಾದ ಹಾಯ್‌ಹೊಳೆ, ಬಾರೆಹಳ್ಳ ಹಾಗೂ ಗೌಡನಕೆರೆಗಳ ಅಡಿ ಬರುವ ಅಚ್ಚುಕಟ್ಟಿಗೆ ನೀರಿನ ಸೌಲಭ್ಯ ಒದಗಿಸುವುದು ಈ ಯೋಜನೆಯ ಉದ್ದೇಶವಾಗಿದೆ. ಈ ಕೆರೆಗಳಿಗೆ ನೀರೊದಗಿಸುವ ಕಾಮಗಾರಿಗೆ ಬೇಕಿರುವ 173 ಎಕರೆ ಅಭಯಾರಣ್ಯ ಪ್ರದೇಶ ಬಿಡುಗಡೆಯಾಗದೇ ಇರುವುದರಿಂದ ಈ ಯೋಜನೆಯು ಇನ್ನೂ ಪ್ರಾರಂಭಿಕ ಹಂತದಲ್ಲಿರುತ್ತದೆ.

ಆ) ಈ ಯೋಜನೆಯ ಕಾಮಗಾರಿಗೆ ಬೇಕಿರುವ ಪ್ರದೇಶವು ಅಭಯಾರಣ್ಯದಲ್ಲಿ ಬರುವುದರಿಂದ ಈ ಜಮೀನಿನ ಬದಲಾಗಿ ಬೇರೆ ಜಮೀನನ್ನು ಅರಣ್ಯ ಇಲಾಖೆಗೆ ಅರಣ್ಯ ಪ್ರದೇಶವನ್ನು ಅಭಿವೃದ್ಧಿಗೊಳಿಸಲು ನೀಡಬೇಕಾಗುತ್ತದೆ.

ಇ) ಶಿವಮೊಗ್ಗ ತಾಲ್ಲೂಕು ಕುಂಸಿ ಹೋಬಳಿ, ಚೋರಡಿ ಗ್ರಾಮದ ಸರ್ವೆ ನಂಬರ್ 196 ರಲ್ಲಿರುವ 173 ಎಕರೆ ಜಮೀನು ತುಂಗಾ ಏತ ನೀರಾವರಿ ಯೋಜನೆಗೆ ಬೇಕಿರುವ 173 ಎಕರೆ ಅಭಯಾರಣ್ಯದ ಭೂಮಿಗೆ ಬದಲಾಗಿ ಅರಣ್ಯ ಪ್ರದೇಶವನ್ನು ಅಭಿವೃದ್ಧಿಗೊಳಿಸಲು ಲಭ್ಯವಿರುವುದಾಗಿ ಶಿವಮೊಗ್ಗ ಜಿಲ್ಲಾಧಿಕಾರಿಗಳು ತಮ್ಮ ವರದಿಯಲ್ಲಿ ತಿಳಿಸಿರುತ್ತಾರೆ.

244 (313) : ಶ್ರೀ ಹಾಲಪ್ಪ ಹೆಚ್. (ಹೊಸನಗರ) ಮಾನ್ಯ ಪೌರಾಡಳಿತ ಹಾಗೂ ಕೆ.ಯು.ಐ.ಡಿ.ಎಫ್.ಸಿ. ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ (ಐ.ಡಿ.ಎಸ್.ಎಂ.ಟಿ.) ಸಮಗ್ರ ಮಧ್ಯಮ ಪಟ್ಟಣ ಅಭಿವೃದ್ಧಿ ಯೋಜನೆಯಡಿಯಲ್ಲಿ ಎಷ್ಟು ತಾಲ್ಲೂಕುಗಳನ್ನು ಆಯ್ಕೆ ಮಾಡಲಾಗಿದೆ. (ತಾಲ್ಲೂಕುವಾರು ವಿವರ ಸಲ್ಲಿಸುವುದು).